## ವಾಸ್ತವದ ಕಣ್ಣು ತೆರೆಸಿತು

“ವೀರ್ಯವಂತ’ರಿಗಿದು ಅಗ್ನಿಪರೀಕ್ಷೆಯ ಕಾಲ!” (ಮೇ 11, ಉಮಾ ಅನಂತ್) ಮುಖಪುಟ ಲೇಖನ ಮಾಹಿತಿಪೂರ್ಣವಾಗಿದೆ. ಮದುವೆಯಾಗಿ ಕೆಲ ವರ್ಷಗಳಾದರೂ ದಂಪತಿಗೆ ಮಕ್ಕಳಾಗದಿದ್ದಾಗ, ಪತ್ನಿಯನ್ನು ದೂಷಿಸುವುದೇ ಸಹಜ ಎನ್ನುವಂತಾಗಿದೆ. ಇಂಥ ಸಂದರ್ಭದಲ್ಲಿ ಲೇಖನ ವಾಸ್ತವದ ಕಣ್ಣು ತೆರೆಸಿದಂತಿದೆ. ಗುಣಮಟ್ಟದ ವೀರ್ಯಾಣುಗಳ ಕೊರತೆಯಿಂದ ಪುರುಷರಲ್ಲಿ ಬಂಜೆತನದ ಪ್ರಕರಣಗಳು ಹೆಚ್ಚಾಗುತ್ತಿರುವ ಸಂಗತಿಯನ್ನು ಲೇಖನದಲ್ಲಿ ವಿಶದವಾಗಿ ವಿವರಿಸಲಾಗಿದೆ.

ಮಕ್ಕಳಾಗದ ವಿಷಯದಲ್ಲಿ ಮಹಿಳೆಯರನ್ನಷ್ಟೇ ಗುರಿಯಾಗಿಸುವ ಅದೆಷ್ಟೋ ಮಂದಿಗೆ ಅರಿವಿನ ಪಾಠದಂತಿದೆ ಲೇಖನ. ‘ಪುರುಷ ಬಂಜೆತನ’ ವಿಷಯವಾಗಿ ಹಲವು ಆಯಾಮಗಳಲ್ಲಿ ಚರ್ಚಿಸಿ, ಪರಿಹಾರ ಕಂಡುಕೊಂಡು ಕೌಟುಂಬಿಕ



ಸಾಮರಸ್ಯ ಕಾಪಾಡುವಲ್ಲಿ ಈ ಲೇಖನ ಸಹಾಯಕಾರಿ.

—ಶಂಕರನಾರಾಯಣ ಭಟ್, ಹೊನ್ನಾವರ

## ಕೊರೊನಾ ನಂತರದ ಲಕ್ಷಣವೇ?

‘ಪುರುಷ ಬಂಜೆತನ’ದ ಬಗೆಗಿನ ಮುಖಪುಟ ಲೇಖನ, ಸಂತಾನಹೀನತೆ ಸಮಸ್ಯೆಗೆ ಕಾರಣಗಳು, ವೀರ್ಯ ತಪಾಸಣೆ ವಿಧಗಳು, ವೀರ್ಯಾಣು ಬ್ಯಾಂಕ್ ಕುರಿತ ತಜ್ಞರ ಬರಹಗಳು ಮಾಹಿತಿಪೂರ್ಣವಾಗಿವೆ. ಪುರುಷರಲ್ಲಿನ ಬಂಜೆತನ ಕೊರೊನಾ ನಂತರದ ಲಕ್ಷಣಗಳಲ್ಲಿ ಒಂದಾಗಿರಬಹುದೇ? ಎಂಬ ಅನುಮಾನ, ಗೊಂದಲವೂ ಉಂಟಾಗಿದೆ. ಇದಕ್ಕೆ ಸೂಕ್ತ ಉತ್ತರವನ್ನು ವೈದ್ಯರು ನೀಡಬೇಕು!

—ದೀಪಕ್ ಶೇಟ್ ಶಿರಾಲಿ, ಬೆಂಗಳೂರು

## ವಿಪುಲ ಮಾಹಿತಿ ನೀಡಿದ ಲೇಖನ

‘ಪುರುಷರ ಬಂಜೆತನ’ ಕುರಿತ ಲೇಖನದಲ್ಲಿ ಬಹುಮುಖ್ಯ ಆರೋಗ್ಯ ಸಮಸ್ಯೆ ಕುರಿತು ಸವಿಸ್ತಾರ ಹಾಗೂ ವಿಪುಲ ಮಾಹಿತಿ ಒದಗಿಸಲಾಗಿದೆ. ತಜ್ಞರ ಅಭಿಪ್ರಾಯಗಳು, ಸೂಕ್ತ ಚಿಕಿತ್ಸಾ ವಿಧಾನಗಳು ದಾರಿದೀಪದಂತಿವೆ. ಎಷ್ಟೋ ಪುರುಷರು, ಇಂಥ ವಿಚಾರಗಳನ್ನು ಹೇಳಿಕೊಳ್ಳಲು ಅಂಜುತ್ತಾರೆ. ಆದರೆ ಇದೊಂದು ಬಹುಮುಖ್ಯ ಸಮಸ್ಯೆ. ಈ ಸಂಬಂಧ ಲೇಖನದಲ್ಲಿ ಸಾಕಷ್ಟು ವಿಚಾರಗಳನ್ನು ಕಲೆಹಾಕಲಾಗಿದೆ.

—ಎ.ಕೆ. ಅನಂತಮೂರ್ತಿ, ಬೆಂಗಳೂರು

## ಅಭಿಮಾನದ ಹೆಮ್ಮೆ



‘ನಂಜನಗೂಡಿನ ರಸಬಾಳೆಯೂ ಅಣ್ಣಾವ್ರ ಸಿಹಿನೆನಪೂ...’ (ಮೇ 11, ನಾಗೇಂದ್ರ ಎಚ್. ಎಸ್.) ಲೇಖನ ಓದಿ ಬಹಳ ಸಂತಸವಾಯಿತು. ನಟ ರಾಜ್‌ಕುಮಾರ್ ಅವರ ಸರಳತೆ, ಅವರನ್ನು ನೋಡಲು ಹೋದವರಿಗೆ ಊಟ ಮಾಡಿಸಿ ಕಳುಹಿಸುತ್ತಿದ್ದ ಅವರ ಪ್ರೀತಿ ನೆನೆದು ಅವರ ಅಭಿಮಾನಿಯಾಗಿದ್ದಕ್ಕೆ ಮತ್ತೊಮ್ಮೆ ಹೆಮ್ಮೆ ಅನಿಸಿತು.

—ವಿ. ನವೀನ್ ಕುಮಾರ್, ಚೋಳೂರುಪಾಳ್ಯ

ಅಣ್ಣಾವ್ರ ನೆನಪು ರಸಬಾಳೆಯಷ್ಟೇ ರುಚಿ ಎನಿಸಿತು. ಬರಹ ತುಂಬಾ ಸೊಗಸಾಗಿದೆ.

—ನಾಗೇಶ್ ಜೆ.ಟಿ., ವಿಜಯಕುಮಾರ್

## ಮಕ್ಕಳ ಪುಸ್ತಕ ಪರಿಚಯ ಸೊಗಸಾಗಿತ್ತು

‘ಬೇಸಿಗೆ ಬೇಗೆಗೆ ಓದೇ ಬೆಳದಿಂಗಳು’ (ಮೇ 11, ರಾಘವೇಂದ್ರ ತೊಗರ್ಸಿ) ಎಳೆಯರ ಅಂಗಳದಲ್ಲಿನ ಮಕ್ಕಳ ಪುಸ್ತಕಗಳ ಪರಿಚಯ ಓದಿದೆ. ನಾನು 10ನೇ ತರಗತಿಯಲ್ಲಿ ಓದುತ್ತಿದ್ದೇನೆ. ಇದರಲ್ಲಿ ಮಕ್ಕಳ ಕಥೆಗಳು, ಪದ್ಯಗಳು, ಹಲವಾರು ಕಥೆಗಳ ಪುಸ್ತಕವನ್ನು ಪರಿಚಯಿಸಿರುವುದನ್ನು ಓದಿ ಸಂತೋಷವಾಯಿತು. ನಾನೂ ಪುಸ್ತಕಗಳನ್ನು ತೆಗೆದುಕೊಳ್ಳುತ್ತೇನೆ. ನಮ್ಮ ಶಾಲೆಯ ಲೈಬ್ರರಿಯವರಿಗೂ ಈ ಪುಸ್ತಕದ ಬಗ್ಗೆ ತಿಳಿಸುತ್ತೇನೆ.

—ಎಂ.ಎಸ್. ಇಂಚರದತ್, ಬೆಂಗಳೂರು

## ಮತ್ತಷ್ಟು ಪುಸ್ತಕಗಳು ನೆನಪಾದವು

ಎಳೆಯರ ಅಂಗಳದಲ್ಲಿನ ಮಕ್ಕಳ ಪುಸ್ತಕಗಳ ಪರಿಚಯ ಓದಿದೆ. ಡಾ. ಎ.ಆರ್. ಕೃಷ್ಣಶಾಸ್ತ್ರಿಗಳ ನಿರ್ಮಲ ಭಾರತಿ ಅಥವಾ ಮಕ್ಕಳ ಮಹಾಭಾರತ ಜ್ಞಾಪಕಕ್ಕೆ ಬಂತು. ನಮ್ಮ ಮಹಾಕಾವ್ಯ ಮಹಾಭಾರತವನ್ನು ಪುಟ್ಟ ಕಂದಮ್ಮಗಳಿಗಾಗಿ ಅರ್ಥವಾಗುವಂತೆ ಬರೆದಿದ್ದಾರೆ. ಈ ಪುಸ್ತಕವನ್ನೂ ಮಕ್ಕಳಿಗೆ ಓದಲು ಕೊಟ್ಟರೆ ನಮ್ಮ ಮಹಾಕಾವ್ಯದ ಪರಿಚಯವೂ ಆಗುತ್ತದೆ ಎನಿಸಿತು.

—ಶ್ಯಾಮಲಾ ಸತ್ಯ, ಬೆಂಗಳೂರು

## ‘ಸ್ಫುರದ್ರೂಪಿ’ ಮರದ ಪರಿಚಯ

‘ಚೆಂದದ ಚಂದಾಳ’ (ಮೇ 4, ವಿನು ಗಂಗೆ) ಲೇಖನದಲ್ಲಿ ಚಂದಾಳ ಮರದ ಬಗ್ಗೆ ಬರೆಯುತ್ತಾ ಪಂಪ ಕವಿ ಕಂಡ ಬನವಾಸಿಯ ಸೊಬಗಿನ ಸಿರಿಯನ್ನು ನೆನಪಿಸಿಕೊಂಡಿರುವುದು ತುಂಬಾ ಅರ್ಥಪೂರ್ಣವಾಗಿದೆ. ಚಂದಾಳದಂತಹ ಸ್ಫುರದ್ರೂಪಿ ಮರ ಬನವಾಸಿಯ ಸುತ್ತಮುತ್ತಲಿನ ಕಾಡಿನಲ್ಲಿ ಈಗಲೂ ಇವೆ ಎಂದಾದರೆ ಪಂಪ ಬನವಾಸಿಯ ಸೊಬಗಿನ ಬಗ್ಗೆ ಹೇಳಿರುವುದು ಉತ್ಪ್ರೇಕ್ಷೆಯ ಮಾತಲ್ಲ ಎಂಬುದನ್ನು ಸಾಬೀತು ಪಡಿಸುತ್ತದೆ.

ಚಂದಾಳದ ಗೊಂಬೆಯನ್ನು ನಮ್ಮ ಮನೆಯಲ್ಲಿ ವಿಶೇಷ ಪ್ರಾಶಸ್ತ್ಯ ನೀಡಿ ಇಟ್ಟಿರುವುದನ್ನು ಬಾಲ್ಯದಿಂದಲೂ ನೋಡಿದ್ದೇನೆ. ಆದರೆ ಅದರ ಐತಿಹ್ಯ ತಿಳಿದಿರಲಿಲ್ಲ. ಈ ಲೇಖನದಿಂದ ಚಂದಾಳದ ಬಗ್ಗೆ ತಿಳಿದುಬಂತು. ಚಂದನೆಯ ಈ ಮರಕ್ಕೆ ‘ಸ್ಫುರದ್ರೂಪಿ’ ಎನ್ನುವ ಅನ್ವರ್ಥನಾಮ ನೀಡಿರುವುದು ಚೆನ್ನಾಗಿದೆ.

—ನಾರಾಯಣ ಎಂ.

## ಪೋಷಕರ ಅವಾಂತರ

‘ಬಾಲ ಪ್ರತಿಭಾ ಪೀಡನ’ (ಮೇ 11, ಪ್ರಸನ್ನ ಪಿ.ಬಿ.) ಪ್ರಬಂಧ, ಮಕ್ಕಳ ಮೂಲಕ ಪೋಷಕರ ಪ್ರತಿಷ್ಠೆಯ ತೋರ್ಪಡಿಕೆಯ ಅವಾಂತರಗಳನ್ನು ತೋರಿತು. ನಮಗೂ ಇಂತಹ ಹಲವು ಸಂದರ್ಭಗಳನ್ನು ಮೆಲುಕು ಹಾಕುವಂತೆ ಮಾಡಿತು.

—ಯೋಗೇಶ್ ಸಹ್ಯಾದ್ರಿ, ಉಡುಪಿ

## ಇನ್‌ಸ್ಟಂಟ್ ಪ್ರತಿಭೆಗಳು

ಇತ್ತೀಚಿನ ದಿನಗಳಲ್ಲಿ ಓದಿದ ಉತ್ತಮ ಪ್ರಬಂಧ. ಅತ್ಯಂತ ಸುಂದರವಾಗಿ, ಹಾಸ್ಯಮಯವಾಗಿ ತಮ್ಮ ಅನುಭವ ಹಂಚಿಕೊಂಡಿದ್ದಾರೆ. ಇತ್ತೀಚೆಗೆ ಹೆಚ್ಚಾಗುತ್ತಿರುವ ಇನ್‌ಸ್ಟಂಟ್ ಪ್ರತಿಭೆಗಳ ಬಗ್ಗೆ ಮಾರ್ಮಿಕವಾಗಿ ತಿಳಿಸಿದ್ದಾರೆ. ಅದರಲ್ಲೂ ಕರೀಮ ಕಾರಿಗೆ ಸಿಕ್ಕಿದ ಪ್ರಸಂಗ ತುಂಬಾ ನಗು ತರಿಸಿತು.

—ಬಿಲ್ಲೇಶ್ವರ ಅಚ್ಚು, ಹುಂಚ



**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in